

ಟೋಕಿಯೊದ ಮಂದಿರದಲ್ಲಿ ಲೇಖಕಿ

ಟೋಕಿಯೋ ಟವರ್– ಇದು ಜಪಾನಿಗರ ಐಫಲ್ ಟವರ್. ಕಿತ್ತಳೆ ಮತ್ತು ಬಿಳಿಯ ಬಣ್ಣದಲ್ಲಿದ್ದು ಸುಮಾರು ಸಾವಿರ ಅಡಿ ಎತ್ತರವಿದೆ. ಇಲ್ಲಿ ಎರಡು ವೀಕ್ಷಣೆಯ ಅಟ್ಟಣಿಗೆಗಳಿವೆ; ಒಂದು ಮಧ್ಯೆ, ಇನ್ನೊಂದು ತುದಿಯಲ್ಲಿ. ವೀಕ್ಷಣೆಯ ಅಟ್ಟಣಿಗೆಗೆ ಸಾರ್ವಜನಿಕರಿಗೆ ಪ್ರವೇಶವಿದ್ದು, ಎಲ್ಲಾ ದಿಕ್ಕಿನಲ್ಲೂ ನಿಂತು ನೋಡಬಹುದು. ಮೋಡಗಳಿಲ್ಲದಿದ್ದರೆ ಇಲ್ಲಿಂದ ಮಂಜಿನಿಂದ ಆವೃತವಾದ ಜ್ವಾಲಾಮುಖಿ ಫುಜಿ ಬೆಟ್ಟವನ್ನೂ ನೋಡಬಹುದು. ಟವರ್‌ನ ಕೆಳ ಅಂತಸ್ತಿನಲ್ಲಿ ಕೆಫೆಟೇರಿಯಾ ಮತ್ತು ಚಿಕ್ಕ ಅಂಗಡಿಗಳಿವೆ. ನೆನಪಿನ ಕಾಣಿಕೆಗಳನ್ನು ಇಲ್ಲಿಯೇ ಕೊಳ್ಳಬಹುದು; ಬೇರೆ ಸ್ಥಳಕ್ಕಿಂತ ಇಲ್ಲಿ ಸ್ವಲ್ಪ ಕಡಿಮೆ ದರದಲ್ಲಿ ಸಿಗುತ್ತದೆ. ಕತ್ತಲಾದ ಬಳಿಕ ಈ ಟವರ್ ಬೆಳಕಿನಿಂದ ಝಗಮಗಿಸುತ್ತದೆ.

**ಶಿಂಜುಕು ಗಾರ್ಡನ್:** ಸುಮಾರು 140 ಎಕರೆ ವಿಸ್ತಾರವುಳ್ಳ ಉದ್ಯಾನವನದ ಸೌಂದರ್ಯವನ್ನು ನೋಡಬೇಕೆಂದರೆ ವಸಂತ ಕಾಲದಲ್ಲಿ (ಮಾರ್ಚ್ ಅಂತ್ಯ ಮತ್ತು ಏಪ್ರಿಲ್ ಮೊದಲ ವಾರ) ಭೇಟಿ ಕೊಡಬೇಕು. ಇಲ್ಲಿನ ಮುಖ್ಯ ಆಕರ್ಷಣೆ ಚೆರ್ರಿ ಗಿಡಗಳು ಮತ್ತು ಅವುಗಳಲ್ಲಿ ಅರಳಿ ನಿಂತ ಹೂವುಗಳು. ಅರಳಿ ಉದುರಿ ಬಿದ್ದ ಹೂವುಗಳು ಹೂಗಳ ಹಾಸಿಗೆಯನ್ನೇ ಹಾಸುತ್ತವೆ. ಈ ಸಂಭ್ರಮವನ್ನು ನೋಡಲೆಂದೇ ಸಾವಿರಾರು ಜನರು ದೇಶ, ವಿದೇಶಗಳಿಂದ ಬರುತ್ತಾರೆ. ಗುಂಪು ಗುಂಪಾಗಿ ಊಟ, ತಿಂಡಿಗಳೊಂದಿಗೆ ಪಿಕ್‌ನಿಕ್ ಬಂದವರು ಮರದ ಕೆಳಗೆ ಚಾಪೆ ಹಾಸಿಕೊಂಡು ಕೂರುತ್ತಾರೆ.

ಟೋಕಿಯೊ ಮ್ಯೂಸಿಯಮ್, ಸುಕಿಜಿ ಮಾರುಕಟ್ಟೆ, ಮೆಯಿಜಿ ಪುಣ್ಯಕ್ಷೇತ್ರ, ಹಚಿಕೊ ಮೂರ್ತಿ ಮತ್ತು ಗಿಂಝಾವನ್ನೂ ಸಂದರ್ಶಿಸಬಹುದು.

ಜಪಾನಿಗೆ ಪ್ರವಾಸ ಹೊರಟಾಗ ಕೆಲವು ಸಮಸ್ಯೆಗಳು ಎದುರಾಗಬಹುದು. ಅದರಲ್ಲಿ ಮುಖ್ಯವಾದದ್ದು ಭಾಷೆಯ ಸಮಸ್ಯೆ. ಜಪಾನಿಗರು 'ಜಪನೀಸ್' ಭಾಷೆಯನ್ನೇ ಬಳಸುವುದನ್ನು ಇಷ್ಟ ಪಡುತ್ತಾರೆ. ಎಲ್ಲೆಲ್ಲೂ ಜಪನೀಸ್ ಬೋರ್ಡುಗಳೇ. ಅಲ್ಲೊಂದು, ಇಲ್ಲೊಂದು ಇಂಗ್ಲಿಷ್ ಬೋರ್ಡ್‌ಗಳನ್ನು ನೋಡಬಹುದು. ಹೊಸ ಪೀಳಿಗೆಯ ಜನರು ಇಂಗ್ಲಿಷನ್ನು ಕಲಿಯುತ್ತಿದ್ದಾರೆ.

ಜಪಾನ್ ಪ್ರವಾಸದಲ್ಲಿ ಇನ್ನೊಂದು ಮುಖ್ಯ ಸಮಸ್ಯೆ ಆಹಾರದ್ದು. ಅನ್ನ ಮತ್ತು ಮೀನು ಜಪಾನಿಗರ ಪ್ರಿಯವಾದ ಆಹಾರ. ಆದರೆ ಅವರ ಗ್ರೀನ್ ಟೀ, ಸೂಪ್ ಮತ್ತು ಸುಷಿ ಮಾತ್ರ ಭಾರತೀಯರಿಗೆ ಇಷ್ಟವಾಗಬಹುದು. ಇತರ ಆಹಾರಗಳು ಭಾರತೀಯರಿಗೆ ಒಗ್ಗುವುದು ಸ್ವಲ್ಪ ಕಷ್ಟವೇ. ಜಪಾನಿನ ಮುಖ್ಯ ನಗರಗಳಾದ ಟೋಕಿಯೊ, ನಾರಾ, ಕ್ಯೋಟೋ, ಹಿರೋಶಿಮಾದಲ್ಲಿ ಭಾರತೀಯ ರೆಸ್ಟೋರೆಂಟುಗಳಿದ್ದು, ಭಾರತಿಯ ಪ್ರವಾಸಿಗರು ಅದನ್ನು ಹುಡುಕಿಕೊಂಡು ಹೋಗುವುದೇ ಹೆಚ್ಚು. ಇಲ್ಲವೇ ಪೀಜ್ಜಾ, ಬರ್ಗರ್ ತಿಂದು ಹೊಟ್ಟೆ ತುಂಬಿಸಿಕೊಳ್ಳಬೇಕು.

ಜಗತ್ತಿನ ಹಲವು ವರ್ಷಗಳ ಕಾಲ ಅಂತರ ಕಾಯ್ದುಕೊಂಡ ಜಪಾನ್ ಈಗ ವಿಶ್ವಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ. ಭಾರತೀಯರು ಕಳೆದ ಹತ್ತು ವರ್ಷಗಳಲ್ಲಿ ಅಮೆರಿಕ ಮತ್ತು ಯೂರೋಪಿನ ದೇಶಗಳಿಗೆ ದಾಂಗುಡಿ ಇಟ್ಟಿರುವುದೇ ಹೆಚ್ಚು. ಹಾಗಾಗಿ ಇದೀಗ ಜಪಾನ್‌ನತ್ತ ಮುಖ ಮಾಡಿದ್ದಾರೆ ಅನ್ನಿಸುತ್ತದೆ. ನಾವು ಜಪಾನ್ ಪ್ರವಾಸ ಮಾಡಿದ ಸಂದರ್ಭದಲ್ಲಿ ಸಾಕಷ್ಟು ಭಾರತೀಯರು ನೋಡಸಿಕ್ಕಿದರು.

ಭಾರತದಿಂದ ಜಪಾನಿಗೆ ಪ್ರವಾಸ ಹೊರಟವರಿಗೊಂದು ಕಿವಿ ಮಾತು: ಅಲ್ಲಿನ ಖರ್ಚಿಗೆ ಬೇಕಾದ ಜಪಾನಿನ ಕರೆನ್ಸಿ 'ಯೆನ್'ಅನ್ನು ಭಾರತದಲ್ಲೇ ಖರೀದಿಸುವುದು ಒಳ್ಳೆಯದು. ಇಲ್ಲವೇ ಹೊರಡುವಾಗ ಡಾಲರ್ ತೆಗೆದುಕೊಂಡು ಹೋಗಿ ಜಪಾನಿನ ಕರೆನ್ಸಿ ಎಕ್ಸ್‌ಚೇಂಜ್‌ನಲ್ಲಿ ಯೆನ್ ಪಡೆಯಿರಿ. ಜಪಾನಿನ ಕರೆನ್ಸಿ ಎಕ್ಸ್‌ಚೇಂಜ್‌ಗಳಲ್ಲಿ ಭಾರತದ ರೂಪಾಯಿಯನ್ನು ವಿನಿಮಯ ಮಾಡಿಕೊಡುವುದಿಲ್ಲ!

ಜಪಾನಿನಲ್ಲಿ ದಾರಿ ಬದಿಯ ವ್ಯಾಪಾರಿಗಳಾಗಲಿ, ಚಿಕ್ಕ ಪುಟ್ಟ ಅಂಗಡಿಗಳಾಗಲಿ ಇಲ್ಲ, ಮತ್ತು ಚರ್ಚೆಯಂತೂ ಇಲ್ಲವೇ ಇಲ್ಲ, ಎಲ್ಲಾದರೂ ಚರ್ಚೆ ಮಾಡಿದರೆ ಮುಖ ಸಿಂಡರಿಸಿಕೊಂಡು ಬಿಡುತ್ತಾರೆ. ಕೆಲವು ವ್ಯಾಪಾರ ಸಂಕೀರ್ಣಗಳಲ್ಲಿ '100 ಯೆನ್' ಅಂಗಡಿಗಳಿವೆ, ಅಲ್ಲಿ ಎಲ್ಲಾ ವಸ್ತುಗಳಿಗೂ 100 ಯೆನ್, ತೋಟಗಾರಿಕೆಗೆ ಬೇಕಾಗುವ ವಸ್ತುಗಳು, ಒಣ ಹಣ್ಣುಗಲು ಇಲ್ಲಿ ಅಗ್ಗ ಅನ್ನಿಸಿತು. 'ಮೇಡ್ ಇನ್ ಚೈನಾ' ವಸ್ತುಗಳು ಕಡಿಮೆಯೇ, ಅದಕ್ಕೊ ಏನೋ ಎಲ್ಲಾ ವಸ್ತುಗಳ ಬೆಲೆ ಅಧಿಕವೆನ್ನಿಸುತ್ತದೆ, ಆದರೆ ವಸ್ತುಗಳ ಗುಣಮಟ್ಟಕ್ಕೆ ಎರಡು ಮಾತಿಲ್ಲ.

ದುಬೈಗೆ ಹೋಗುವವರಿಗೆ ಅಲ್ಲೇ ಏರ್‌ಪೋರ್ಟ್‌ನಲ್ಲಿ ವೀಸಾ ಸಿಗುವಂತೆ, ಜಪಾನ್‌ಗೆ ಹೋಗುವವರಿಗೆ ಆನ್ ಅರೈವಲ್ ವೀಸಾ ಸಿಗುವುದಿಲ್ಲ; ಏನಿದ್ದರೂ ಮೊದಲೇ ವೀಸಾ ಮಾಡಿಸಿಕೊಂಡು ಹೋಗಬೇಕು. ಜಪಾನ್ ರಾಯಭಾರಿ ಕಚೇರಿ ವೀಸಾ ಒದಗಿಸುತ್ತದೆ. 'ಪ್ರವಾಸಿ ವೀಸಾ'ದ ಅವಧಿ ಮೂರು ತಿಂಗಳು. ವೀಸಾ ಪಡೆಯಲು ಒದಗಿಸಬೇಕಾದ ಕಾಗದ ಪತ್ರಗಳು ಮತ್ತು ಪಾಸ್‌ಪೋರ್ಟನ್ನು ನೇರವಾಗಿ ರಾಯಭಾರಿ ಕಚೇರಿಗೆ ಕಳುಹಿಸಬಹುದು, ಇಲ್ಲವೇ ಟ್ರಾವೆಲ್ ಏಜೆನ್ಸಿ ಮೂಲಕವೂ ಸಲ್ಲಿಸಬಹುದು. ಅಂದ ಹಾಗೆ ಬೆಂಗಳೂರಿನಲ್ಲಿ ಜಪಾನ್ ರಾಯಭಾರಿ ಕಚೇರಿಯಿದೆ.

ಜಪಾನಿನ ಬಗ್ಗೆ ಇಷ್ಟೆಲ್ಲ ಓದಿದ ಮೇಲೆ ಅಲ್ಲಿಗೆ ಪ್ರವಾಸ ಹೋಗಬೇಕೆಂಬ ಮನಸ್ಸಾಗುವುದು ಸಹಜ. ಜಪಾನೀ ಭಾಷೆಯ ಕೆಲವು ಶಬ್ದಗಳನ್ನಾದರೂ ಕಲಿಯದಿದ್ದರೆ ಹೇಗೆ? 'ಹಲೋ' ಅನ್ನಬೇಕೆಂದಿದ್ದರೆ 'ಕೊನಿಚಿವಾ' ಅನ್ನಿ! ಹೌದು ಅನ್ನಲು 'ಹೈ' ಅಂದರೆ ಸಾಕು! ಅಲ್ಲ ಎನ್ನಬೇಕಿದ್ದರೆ 'ಲೈ' ಅನ್ನಿ! ಕ್ಷಮಿಸಿ ಎನ್ನಬೇಕೆಂದಿದ್ದರೆ, ಸುಮಿಮಸೇನ್ ಅಂದರಾಯಿತು. ಸ್ವಲ್ಪ ಕಷ್ಟ ಅಂದುಕೊಂಡಿರಾ...? ಧನ್ಯವಾದಗಳು ಇನ್ನೂ ಕಷ್ಟವಿದೆ– ಅರಿಗೊತಾ ಗೊಝೈಮಾ! ಗುಡ್‌ಮಾರ್ನಿಂಗ್ ಅನ್ನುವುದೂ ಕಷ್ಟವೇ– ಒಹ್ಯೊ ಗೊಝೈಮಸು!

ಇಲ್ಲಪ್ಪ, ಕಷ್ಟವೇನಿಲ್ಲ. ಅಲ್ಲಿ ಹೋಗಿ ಒಂದು ವಾರ ಉಳಿದುಕೊಂಡರೆ ಇವಿಷ್ಟು ಶಬ್ದಗಳಂತೂ ಕಂಠಪಾಠವಾಗುತ್ತವೆ. ಏಕೆಂದರೆ ಜಪಾನೀಯರು ವಿನಯಶೀಲರು ಮತ್ತು ಸ್ನೇಹಜೀವಿಗಳು. ಈ ಶಬ್ದಗಳು ಪದೇ ಪದೇ ನಿಮ್ಮ ಕಿವಿಗೆ ಬೀಳುತ್ತವೆ.